C.C.No.1241/2021
PW-16
CW-26

**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ., ಪಾವಗಡ ನ್ಯಾಯಾಲಯ**

**ಸಿ.ಸಿ. ಸಂಖ್ಯೆ 1241/2021**

**ಪ್ರಾಸಾಃ 16**

**ಚಾಸಾಃ 26**

**ದಿನಾಂಕ 11.08.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | - | ರಂಗಪ್ಪ |
| ತಂದೆಯ ಹೆಸರು | - | ಸೋಮ್ಲಾನಾಯ್ಕು |
| ವಯಸ್ಸು | - | 62 ವರ್ಷ |
| ವೃತ್ತಿ | - | ನಿವೃತ್ತಿ ಪಿ.ಎಸ್.ಐ |
| ವಾಸ ಸ್ಥಳ | - | ಪಳವಳ್ಳಿತಾಂಡ ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದಃ**

ದಿನಾಂಕ **26-07-2015** ರಿಂದ ದಿನಾಂಕ **02-07-2021** ರವರೆಗೆ ಎ.ಎಸ್.ಐ ಆಗಿ ವೈ.ಎನ್. ಹೊಸಕೋಟೆ ಪೋಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ **11-08-2020** ರಂದು ಬೆಳಗ್ಗೆ **10-30** ಗಂಟೆ ಸಮಯದಲ್ಲಿ ಠಾಣಾಧಿಕಾರಿಯಾಗಿದ್ದಾಗ, ಈ ಕೇಸಿನ ಫಿರ್ಯಾದಿ ಚಾಸಾ-**1** ಪ್ರಕಾಶ್ ಎಂಬುವವರು ಠಾಣೆಗೆ ಹಾಜರಾಗಿ ಟೈಪ್ ಮಾಡಿದ ದೂರಿನೊಂದಿಗೆ ದಿನಾಂಕಃ **10-08-2020** ರಂದು ರಾತ್ರಿ ಯಾರೋ ಕಳ್ಳರು ನಮ್ಮ ಮನೆಯ ಬೀಗ ಮುರಿದು ಮನೆಯಲ್ಲಿದ್ದ ರೂ.**2,500/** ಬೆಲೆಯ ಬೆಳ್ಳಿಯ ಮುಖವಾಡ ಮತ್ತು ರೂ.**20,000/-** ಹಣವನ್ನು ಕಳ್ಳತನ ಮಾಡಿಕೊಂಡು

ಹೋಗಿರುತ್ತಾರೆಂದು ನೀಡಿದ ದೂರನ್ನು ಪಡೆದು ಠಾಣಾ ಮೊಕದ್ದಮೆ ನಂಃ 76/2020 ಕಲಂ 457, 380 ಐ.ಪಿ.ಸಿ ರೀತ್ಯ ಪ್ರಕರಣ ದಾಖಲಿಸಿರುತ್ತೇನೆ. ಸದರಿ ದೂರು ಈಗಾಗಲೇ ನಿಪಿ-8 ಎಂದು ಗುರುತಿಸಲ್ಪಟ್ಟಿತ್ತು. ಸದರಿ ನಿಪಿ-8 ರಮೇಲಿನ ಸಾಕ್ಷ್ಯ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು. ಸದರಿ ದೂರಿನಂತೆ ದಾಖಲಿಸಿದ ಪ್ರ.ವ.ವರದಿಯನ್ನು ನಿಪಿ-17 ಎಂದು ಮತ್ತು ಅದರ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಕೃತ್ಯ ನಡೆದ ಸ್ಥಳವಾದ ತಿಪಾಗಾನಹಳ್ಳಯ ಚಾಸಾ-1 ರವರ ಮನೆಯ ಬಳಿ ಭೇಟಿ ನೀಡಿ ಪಂಚಾಯ್ತಿದಾರರಾಗಿ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಕೃತ್ಯ ಸ್ಥಳದ ಪಂಚನಾಮೆಯನ್ನು ಜರುಗಿಸಿದ್ದು, ಮನೆಯ ಬೀಗವನ್ನು ಮುರಿದು ಒಳಗೆ ಪ್ರವೇಶ ಮಾಡಿ ದೇವರ ಕೋಣೆಯಲ್ಲಿದ್ದ ಬೀರುವನ್ನು ಯಾವುದೇ ಆಯುಧದಿಂದ ಮೀಟಿ ಬೀರುವನ್ನು ತೆಗೆದಿದ್ದು ಸ್ಥಳದಲ್ಲಿ ಬಟ್ಟೆಗಳು ಚಲ್ಲಾಪಿಲ್ಲಿಯಾಗಿ ಬಿದಿದ್ದು ಫಿರ್ಯಾದಿಯು ಇದೇ ಬೀರುವಿನಲ್ಲಿದ್ದ ಸುಮಾರು ರೂ.2,500/ ಬೆಲೆಯ ಲಕ್ಷ್ಮಿಯ ಬೆಳ್ಳಿಯ ಮುಖವಾಡ ಮತ್ತು ರೂ.20,000/- ಹಣವನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆಂದು ತೋರಿಸಿದ ಸ್ಥಳವನ್ನು ಮದ್ಯಾಹ್ಷ 12-15 ರಿಂದ 1-15 ಗಂಟೆಯವರೆಗೆ ಪಂಚನಾಮೆ ಮಾಡಿದ್ದು, ಸ್ಥಳದಲ್ಲಿ ಫಿರಾದಿ ನೀಡಿದ ಒಂದು ಬೀಗ, ಒಂದು ಕಬ್ಬಿಣದ ತುರೇಮಣಿ ಪಂಚರ ಮುಖೇನ ಪಂಚನಾಮೆಯೊಂದಿಗೆ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಕೃತ ಸ್ಥಳದ ಪಂಚನಾಮೆ ಈಗಾಗಲೇ ನಿಪಿ-9 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷ್ಯ ಸಹಿಯನ್ನು ನಿಪಿ-9(ಸಿ) ಎಂದು ಗುರುತಿಸಲಾಯಿತು.

ನಂತರ ಠಾಣಾ ಮಾಲು ಪಟ್ಟಿ ನಂಃ **69/2020** ರಲ್ಲಿ ನಮೂದು ಮಾಡಿ ದಾಖಲಿಸಿಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಚಾಸಾ-**27** ರವರಿಗೆ ಕಡತವನ್ನು ಹಸ್ತಾಂತರಿಸಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಪಿ.ಹೆಚ್.ಎಸ್. ವಕೀಲರಿಂದ</u>

ದಿನಾಂಕಃ 10-08-2020 ರಂದು ಚಾಸಾ-1 ರವರು ದೂರು ನೀಡುವ ಸಮಯದಲ್ಲಿ ನಾನು ಕರ್ತವ್ಯದಲ್ಲಿ ಹಾಜರಿದ್ದೆ ಎಂದು ತೋರಿಸಲು ಪ್ರ.ವ.ವರದಿ ದಾಖಲೆಯನ್ನು ವರೆತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಚಾಸಾ-1 ರವರು ಟೈಪ್ ಮಾಡಿದ ದೂರನ್ನು ತಂದಿರುವುದಿಲ್ಲ ಬದಲಾಗಿ ಠಾಣೆಯಲ್ಲಿಯೇ ದೂರನ್ನು ಟೈಪ್ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸ್ಥಳ ಪಂಚನಾಮೆ ಜರುಗಿಸಿದ ಫಿರ್ಯಾದಿಯ ಮನೆಯ ಚಕ್ಕುಬಂದಿ ಪೂರ್ವಕ್ಕೆ - ಫಿರ್ಯಾದಿಯ ಹಳೆಯ ಮನೆ, ಪಶ್ಚಿಮಕ್ಕೆ - ಕೋಟಾಗುಡ್ಡ - ಹೊಸಕೋಟೆ ರಸ್ತೆ, ಉತ್ತರಕ್ಕೆ - ಮನೆಯ ಮುಂಬಾಗದ ಸಿಸಿ ರಸ್ತೆ, ದಕ್ಷಿಣಕ್ಕೆ - ಚಂದ್ರಮೌಳಿ ಎಂಬುವವರ ಮನೆ ಇರುತ್ತದೆ.

ನಾನು ಕೃತ್ಯ ನಡೆದ ಸ್ದಳಕ್ಕೆ ಪಂಚನಾಮೆ ಜರುಗಿಸಲು ಹೋಗಿಲ್ಲ ಬದಲಾಗಿ ಎಲ್ಲ ದಾಖಲೆಗಳನ್ನು ಠಾಣೆಯಲ್ಲಿಯೇ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಾವು ನಿಪಿ-9 ರ ಪಂಚನಾಮೆಯಲ್ಲಿ ಅಮಾನತ್ತು ಪಡಿಸಿಕೊಂಡ ಬೀಗದ ಮೇಲೆ Jalaram 4 GLTE ಎಂದು ನಮೂದಿತ್ತು. ಸದರಿ ಅಮಾನುತ್ತುಪಡಿಸಿಕೊಂಡ Jalaram 4 GLTE ಬೀಗ ಮತ್ತು ತುರೇಮಣೆಗಳು ಮಾರುಕಟ್ಟೆಯಲ್ಲಿ ಇತರೆ ಅಂಗಡಿಗಳಲ್ಲಿ ದೊರೆಯುತ್ತವೆ ಎಂದರೆ ಸರಿ

C.C.No.1241/2021
PW-16
CW-26

ಸಾಕ್ಷಿಯು ಮುಂದುವರೆದು ನಾವು ಸದರಿ ವಸ್ತುಗಳನ್ನು ಪಂಚನಾಮೆಯಲ್ಲಿ ಅಮಾನುತ್ತುಪಡಿಸಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಪಂಚನಾಮೆಯಲ್ಲಿ ನಾವು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಮತ್ತು ಅಮಾನತ್ತು ಪಂಚಾನಾಮೆ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಾವು ಯಾವುದೇ ಪಂಚನಾಮೆಯನ್ನು ಜರುಗಿಸದೇ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಳ್ಳದೇ ಆರೋಪಿಗಳ ವಿರುದ್ಧ ಸುಳ್ಳು ದೂರನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚುಮಾಡಲಾಯಿತು.)

ಓ . ಹೇ. ಕೇ. ಸರಿ ಇದೆ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ